ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-3, November-December 2025, Pp. 1-3
©*IIMRD*, Mysuru
IIMRD JOURNALS
www.iimrd.com

# ಹಳ್ಳಿ ಬದುಕಿನ ಚಿತ್ರಗಳು

**ಕುಸುಮ ಬಿ.ಎಂ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು.

**ಸಾರಾಂಶ: (Abstract)**

*ಕನ್ನಡ ಸಾಹಿತ್ಯವು ಸಾವಿರದ ಐನೂರು ವರ್ಷಗಳ ಇತಿಹಾಸವನ್ನು ಹೊಂದಿದೆ. ಆರಂಭ ಕಾಲದಿಂದಲೂ ಹಳ್ಳಿ ಬದುಕಿನ ಬಗೆಗೆ ಅಪಾರವಾದ ಒಲವನ್ನು ನಮ್ಮ ಕವಿಗಳು ತೋರಿದ್ದಾರೆ. ಕನ್ನಡದ ಮೊಟ್ಟ ಮೊದಲ ಉಪಲಬ್ಧ ಕೃತಿಯಾದ 'ಕವಿರಾಜಮಾರ್ಗ'ದಲ್ಲಿ 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂಬ ಅಭಿಮಾನಕ್ಕೆ ಪಾತ್ರರಾಗಿರುವವರು ಹಳ್ಳಿಯ ಜನರೇ ಆಗಿದ್ದಾರೆ. ನಗರಗಳ ನಾಜೂಕಿನ ಬದುಕಿನ ಮುಂದೆ ಹಳ್ಳಿಯ ಮುಗ್ಧ ಸರಳ ಬದುಕು ಮನಸೂರೆಗೊಳ್ಳುತ್ತದೆ. ಹಳ್ಳಿಯ ನಿಸರ್ಗ ಸೌಂದರ್ಯ, ವೇಗ ರಹಿತ ಜೀವನ, ಸಹಬಾಳ್ವೆ, ಪ್ರಕೃತಿಯ ಜೊತೆಗಿನ ಅವಿನಾಭಾವ ಸ್ನೇಹ ಇಂತಹ ಅಪೇಕ್ಷಣೀಯ ಗುಣಗಳಿಂದ ಕೂಡಿರುವ ಹಳ್ಳಿಯ ಜೀವನ ಸುಂದರವಾದುದು.*

**ಮುಖ್ಯಪದಗಳು (Keywords):** *ಕನ್ನಡ ಸಾಹಿತ್ಯ, ಹಳ್ಳಿ ಬದುಕಿನ ಚಿತ್ರಗಳು, ನಮ್ಮ ಊರಿನ ರಸಿಕರು*

## ಪೀಠಿಕೆ

ಬಡತನ ಗೊರೂರು ರಾಮಸ್ವಾಮಿ ಅಯ್ಯಂಗಾರರ 'ನಮ್ಮ ಊರಿನ ರಸಿಕರು' ಹಳ್ಳಿಯ ಬದುಕಿನ ಹಲವು ಚಿತ್ರಗಳನ್ನು ಬಿಡುಸುತ್ತದೆ. ನಿರೂಪಕರು ತಮ್ಮ ಊರಿನ ಚಿತ್ರಣ ನೀಡುತ್ತಲೇ ಅದರ ರಮ್ಯತೆಯನ್ನು ಮನದಟ್ಟು ಮಾಡಿಸುತ್ತಾರೆ. "ನಮ್ಮ ಊರು ಮಲೆನಾಡಿನ ಸೆರಗಿನಲ್ಲಿದೆ. ಮಧ್ಯಕ್ಕಿಂತಲೂ ಯಾವುದರಲ್ಲೂ ಯಾವಾಗಲೂ ಸೆರಗು ಹೆಚ್ಚು ಸೊಗಸು. ಮಲೆನಾಡಿನ ಸೂರ್ಯರಶ್ಮಿಯಿಲ್ಲದ ಮಿತಿಮೀರಿದ ಜಡಿಮಳೆಯೂ, ಕೆಸರೂ, ಮೈಯನ್ನು ಕಡಿಯುವ ಕುಳಿರ್ಗಾಳಿಯೂ ಅಲ್ಲಿಲ್ಲ. ಬಯಲು ಸೀಮೆಯ ಉರಿಬಿಸಿಲೂ, ಬೆಂಕಿಯ ಕಾದ ಧೂಳೂ ಅಲ್ಲಿಲ್ಲ. ಮಲೆನಾಡಿನ ಮಳೆಯ ಕೊಂಚ ಭಾಗ ಮಾತ್ರ ನಮ್ಮೂರಿಗೆ ಬೀಳುತ್ತದೆ. ಬೇಸಿಗೆಯ ಉರಿಬಿಸಿಲಿನ ತುದಿ ಮಾತ್ರ ಈ ಸೆರಗನ್ನು ಸೋಕುತ್ತದೆ. ಹಸುರಾದ ಚಿಗುರಿನಿಂದ ಕೂಡಿದ ಮರದ ಮಧ್ಯದಲ್ಲಿ ಎಲ್ಲೋ ಹಕ್ಕಿಯೊಂದು ಕೂಗುತ್ತಿದ್ದರೆ, ಎಲೆಗಳ ಮರೆಯಲ್ಲಿ ಹೂ ಒಂದು ಅರಳಿ ಸುವಾಸನೆಯನ್ನು ಹೊರಕ್ಕೆ ಸೂಸುತ್ತಿದ್ದರೆ ಹೇಗೋ ಹಾಗೆ, ನಮ್ಮ ಊರು ಸುತ್ತಲೂ ಬೆಳೆದಿರುವ ಸುಮಾರಾಗಿ ಎತ್ತರವಾಗಿರುವ ಮರಗಳ ಮಧ್ಯದಲ್ಲಿ ಹೆಚ್ಚು ಬಾಹ್ಯಾಡಂಬರವಿಲ್ಲದೆ ನಿಂತಿದೆ." ಊರಿನ ಹಿತಕರವಾದ ಹವಾಗುಣ ನೀಡಿರುವ ವಿಶೇಷತೆಗಳನ್ನು ಅಭಿಮಾನದಿಂದಲೇ ಹೇಳಿಕೊಳ್ಳುತ್ತಾರೆ.

ಗೊರೂರಿನ ಪ್ರಾಕೃತಿಕ ಲಕ್ಷಣಗಳು ಊರನ್ನು ನಂದನವಾಗಿಸಿರುವ ರೀತಿಯನ್ನು ಪರಿಚಯಿಸುತ್ತಾರೆ. "ನಮ್ಮ ಊರು ಚಿಕ್ಕದಾದರೂ ಅದರಲ್ಲಿ ಪ್ರಕೃತಿಯ ಬಗೆಬಗೆಯ ಬೆಡಗುಗಳು ಅಡಕವಾಗಿವೆ. ಊರ

ಮುಂದೆ ಹರಿಯುವ ಹೇಮಾವತಿ ನದಿ. ಅದರ ತೀರದಲ್ಲಿ ಉದ್ದಕ್ಕೂ ಬೆಳೆದಿರುವ ಸಣ್ಣ ಸಣ್ಣ ತೋಪುಗಳು, ಬೇರೆ ಬೇರೆ ಕಡೆಗಳಲ್ಲಿ ತೋರುವ ಸೋಪಾನಗಳು. ಸೇತುವೆ, ನದಿಯಿಂದ ಒಂದು ಫರ್ಲಾಂಗ್ ಊರಿನ ಕಡೆಗೆ ಕೋಟೆಯ ಕಾಲಬುಡದಲ್ಲಿ ಹರಿಯುವ ತಿಳಿನೀರಿನ ಕಾಲುವೆ, ಕಾಲುವೆಗೂ ನದಿಗೂ ನಡುವೆ ಹಸುರು ಬಟ್ಟೆಯನ್ನು ಹಾಕಿದಂತೆ ಪಚ್ಚೆಯಾದ ಪೈರಿನ ಬಯಲು ಕಾಲುವೆಯ ಒಂದು ಕಡೆ ಪೇಟೆ, ಮತ್ತೊಂದು ಕಡೆ ಕೋಟೆ, ಊರೊಳಗಿನ ದೇವಸ್ಥಾನದ ಮುಂದಲ ತಿಳಿನೀರಿನ ಕೊಳ, ನಾನಾ ವಿಧವಾದ ಹೂಗಳಿಂದ ಕೂಡಿದ ಮುಂದಲ 'ಶೃಂಗಾರ ತೋಟ'ವೆಂಬ ಉದ್ಯಾನ, ಊರಿನಿಂದ ಪೂರ್ವಕ್ಕೂ ಪಶ್ಚಿಮಕ್ಕೂ ಎದ್ದು ತೋರುವ ತೋಟಗಳು, ಊರಿನ ಸುತ್ತ ಚಿಕ್ಕ ಚಿಕ್ಕ ಕಾಡುಗಳು, ಬೆಟ್ಟಗುಡ್ಡಗಳು– ಇವುಗಳನ್ನೆಲ್ಲಾ ನೋಡಿ ನಾವು ನಮ್ಮ ಮಿತ್ರರನೇಕರು ನಮ್ಮ ಊರಿಗೆ ಪ್ರಕೃತಿ ದೇವಿಯು ಹೆಚ್ಚಾದ ದಯವನ್ನು ತೋರಿಸಿದ್ದಾಳೆಂದು ತಿಳಿದುಕೊಂಡಿದ್ದೇವೆ." ತಾವು ಕಂಡ ಇತರ ಊರುಗಳಿಗಿಂತಲೂ ತಮ್ಮೂರು ಸುಂದರ ಎಂಬುದು ನಿರೂಪಕರ ಹೆಮ್ಮೆಯ ಸಂಗತಿ.

ಊರು ಎಂಬುದು ಕೇವಲ ಮರಗಿಡಗಳಿಂದ ಉಂಟಾಗದು, ಜನರು ಊರಿನ ಮುಖ್ಯ ಪ್ರಾಣವಾಗಿರುತ್ತಾರೆ. ಆ ಊರಿನ ಜನರು ಬಲು ರಸಿಕರೆಂದು ನಿರೂಪಿಸುತ್ತಾರೆ. ಅವರ ರಸಿಕತೆಗೆ ಉದಾಹರಣೆಯಾಗಬಲ್ಲ ಹಲವು ಪ್ರಸಂಗಗಳನ್ನು ಕೃತಿಯಲ್ಲಿ ಅನಾವರಣಗೊಳಿಸಿದ್ದಾರೆ. ಭಿನ್ನ ವ್ಯಕ್ತಿತ್ವದ, ವಿಭಿನ್ನ ಅಭಿರುಚಿಯ ಜನರು ಊರಿನಲ್ಲಿದಾರೆ. ಬ್ರಾಹ್ಮಣರು, ಶೂದ್ರರು, ಸಾಹೇಬರು, ಆದಿಕರ್ನಾಟಕರು ನೆಲೆಸಿದ್ದಾರೆ. ಇವರೆಲ್ಲಾ ಪರಸ್ಪರ ಸಹಕಾರದಿಂದ ಸಹಬಾಳ್ವೆ ನಡೆಸುತ್ತಾರೆ.

ಊರಿಗೆ ಬೆಳಗಾಗುವುದು ಕಾಫಿ ಘಮದ ಮೂಲಕ. ಊರಿನವರಿಗೆಲ್ಲಾ ಕಾಫಿ ಕುಡಿಯುವುದು ಪ್ರೀತಿಯ ವಿಷಯದಂತೆಯೇ ದೊಡ್ಡ ಗೌರವವೆಂದೇ ಎಣಿಕೆಯಾಗಿದೆ. ಹೆಂಗಸರಿಗಂತೂ ಬೆಳಗಾದ ಕೂಡಲೇ ಕಾಫಿ ತಿಂಡಿಯ ಹೊರತು ಬೇರೆ ಮಾತೇ ಇಲ್ಲ. ಕಾಫಿ ತಿಂಡಿ ಆದ ಹೊರತು ಅವರಾರೂ ಹೊಳೆ ಕಾಲುವೆಗಳಿಗೆ ಪಾತ್ರೆಗಳನ್ನು ತೊಳೆಯುವುದಕ್ಕೂ ಸೀರೆಗಳನ್ನು ಒಗೆಯುವುದಕ್ಕೂ ಹೋಗುವುದೇ ಇಲ್ಲ. ಕಾಫಿ ಕುಡಿಯದವರೂ ಕೂಡ "ಕಾಫಿಯನ್ನು ಕುಡಿದೆ" ಎಂದು ಹೇಳಿಕೊಳ್ಳಬೇಕೆಂದು ಹೆಂಗಸರಲ್ಲಿ ಒಂದು ತೀರ್ಮಾನ ನಡೆದು ಹೋಗಿದೆ.

ಹೊಳೆಯ ಸ್ನಾನ ಊರಿನ ಸೊಗಸುಗಳಲ್ಲಿ ಒಂದು. ಮಳೆ "ಜಡಿಹಿಡಿದ" ದಿವಸಗಳು ಕೆಲ ವಿಧವೆಯರು ಹೊಳೆಯಲ್ಲಿ ಸ್ನಾನಕ್ಕೆ ಹೋಗುತ್ತಾರೆ. ಹೊಳೆಯ ಬಳಿ ಮುಸುರೆ ಪಾತ್ರೆಗಳನ್ನು ತೊಳೆಯಲು ಹೋಗುವ ಹೆಂಗಸರು ಅಲ್ಲಿ ತಮ್ಮದೇ ಆದ ಪ್ರಪಂಚದಲ್ಲಿ ಮುಳುಗಿರುತ್ತಾರೆ. ಅಲ್ಲಿ ಅವರು ಎಷ್ಟು ಸ್ವತಂತ್ರರಾಗಿರುತ್ತಾರೆ ಎಂದರೆ ನದಿಯ ಅಲೆಯು ಮತ್ತಷ್ಟು ಎದ್ದು ಕುಣಿಯುವಂತೆ ಕಿಲಕಿಲ ಧ್ವನಿಯಲ್ಲಿ ನಗುತ್ತಾರೆ. ತಮ್ಮ ದೇಹವನ್ನು ಹೇಮಾವತಿಯ ಶೀತಲವಾದ ಜಲದಲ್ಲಿ ಮುಳುಗಿಸಿ ಹೇಗೆ ಉಲ್ಲಾಸವನ್ನೂ ಆನಂದವನ್ನೂ ತೋರಿಸುತ್ತಾರೆಂದರೆ ಅವುಗಳನ್ನು ವರ್ಣಿಸಲಿಕ್ಕಾಗುವುದಿಲ್ಲ ಎಂದು ನಿರೂಪಕರು ಅಚ್ಚರಿ ಪಡುತ್ತಾರೆ.

ಮಳೆಗಾಲದಲ್ಲಿ ಒಂದು ತಿಂಗಳು ಜಡಿಮಳೆ ಹಿಡಿಯುತ್ತದೆ. ಬೀದಿಗೆ ತಲೆಹಾಕಲು ಅಸಾಧ್ಯವಾದ ಆ ದಿನಗಳಲ್ಲಿ ಊರಿನ ಕಷ್ಟಜೀವಿಗಳಾದ ರೈತರು ಕೆಲಸವನ್ನು ಬಿಡುವುದಿಲ್ಲ. ರೈತನಾದ ರಂಗೇಗೌಡನು

ಮಂಡಿಯುದ್ದದ ಕೆಸರಿನ ಗದ್ದೆಯಲ್ಲಿ, ತಲೆಗೊಂದು ಹರಕು ಗೋಣಿಯ ಚೀಲ(ಅದೇ ಅವನ ಛತ್ರಿ)ವನ್ನು ಹೊದ್ದು ಕೆಲಸ ಮಾಡುತ್ತಾನೆ. ಊರಿನಲ್ಲಿ ಬ್ರಾಹ್ಮಣರು, ಶೂದ್ರರು, ಸಾಹೇಬರು ಎಲ್ಲರೂ ಆರಂಭಗಾರರೆ. ನವರಾತ್ರಿ, ಉಗಾದಿ, ಮೊಹರಂ ಹಬ್ಬಗಳಲ್ಲಿ ಆನಂದದಿಂದ ಕುಣಿದಾಡಲು ಬೇಕಾಗುವಷ್ಟು ಪೈರನ್ನು ಬೆಳೆಯುತ್ತಾರೆ.

ಊರಿನವರು ಉದಾರತೆಗೆ ಹೆಸರಾಗಿದ್ದಾರೆ. "ಒಕ್ಕಲಿಗನಿಗೆ ತಾನು ಕಬ್ಬಿನ ಆಲೆ ಕಟ್ಟಿದರೆ ಮಹಾರಾಜರ ಪದವಿ ಬಂದ ಹಾಗೆ. ತಾನು ಆಲೆ ಕಟ್ಟಿದುದರಿಂದ ರಂಗನಿಗೂ ಸ್ವಲ್ಪ ಹೆಮ್ಮೆ ಬಂದಿತ್ತು. ಬಂದವರಿಗೆಲ್ಲಾ ಒಂದು ಚೂರು ಕಬ್ಬು ಮತ್ತು ಒಂದು ಲೋಟ ಹಾಲನ್ನು ಕೊಡುವ ಶಕ್ತಿ ತನಗೆ ಬಂದಿತಲ್ಲಾ ಎಂಬುದೇ ಆ ಹೆಮ್ಮೆಯ ಮುಖ್ಯ ಕಾರಣವಾಗಿದ್ದಿತು. ಆ ಕೊಡುವುದರಲ್ಲಿಯೂ ಅವನು ಮಹಾರಾಜನ ಗಾಂಭೀರ್ಯವನ್ನೂ ಔದಾರ್ಯವನ್ನೂ ತೋರಿಸುತ್ತಿದ್ದನು."

ಊರಿನವರೆಲ್ಲಾ ಬಹಳ ರಸಿಕರು. ಅಲ್ಲಿ ವಿನೋದಪ್ರಿಯರಲ್ಲದವರು ಯಾರೂ ಸಿಕ್ಕುವುದಿಲ್ಲ. ಕೋಪಿಷ್ಠರಾಗಲೀ ಮುಖವನ್ನು ಗಂಟು ಹಾಕಿಕೊಳ್ಳುವವರಾಗಲಿ ಅಲ್ಲಿಗೆ ಬಂದರೆ ಕೂಡಲೇ ಮಾಯವಾಗಿಬಿಡುತ್ತಾರೆ. ಅಥವಾ ಮುಂಗೋಪವನ್ನು ಬಿಟ್ಟು ಎಲ್ಲರಂತೆ ತಾವೂ ನಗಲು ಪ್ರಾರಂಭಿಸುತ್ತಾರೆ ಎಂಬ ಹಿರಿಮೆ ನಿರೂಪಕರಿಗೆ.

ಊರಿನವರು ಸಹೃದಯತೆ ಮತ್ತು ಕಲಾರಸಿಕತೆಗೆ ಹೆಸರಾಗಿದ್ದಾರೆ. ಊರಿನಲ್ಲಿ ನಡೆದ ಹರಿಶ್ಚಂದ್ರ ಬಯಲಾಟಕ್ಕೆ ಜನರು ಉತ್ಸಾಹದಿಂದ ಕೆಲಸಗಳನ್ನೆಲ್ಲಾ ಬೇಗ ಮುಗಿಸಿ ಬಂದು ಸೇರುತ್ತಾರೆ. ಬೆಳಗಾಗುವ ತನಕ ನಡೆದ ಆಟವನ್ನು ಸೂರ್ಯೋದಯವಾಯಿತೆಂದು ನಿಲ್ಲಿಸಿದಾಗ, ಹೊರಡಲು ಎದ್ದು ನಿಂತ ಜನರು ವಿಷ್ಣು ಪಾತ್ರದಾರಿಯ ಕೋರಿಕೆಯಿಂದ ಮತ್ತೆ ಕುಳಿತು ಅವನ ಕುಣಿತವನ್ನು ನೋಡುತ್ತಾರೆ.

ಹಬ್ಬದ ಸಂದರ್ಭಗಳಲ್ಲಿಯೂ ಜನ ಕೋಲಾಟ, ಬಯಲಾಟ, ಜನಪದಗೀತೆಗಳನ್ನು ಹಾಡುತ್ತಾರೆ. ನಾಣಿಯು ಮಾತು ಮಾತಿಗೂ ಪ್ರಾಸವುಳ್ಳ ಪದ(ಪದ್ಯ)ವನ್ನು ಕಟ್ಟಿ ಹಾಡುತ್ತಾನೆ.ಯುಗಾದಿಯ ಹಬ್ಬದಂದು ಬಟ್ಟೆಯ ಚೆಂಡಿನಲ್ಲಿ ಹಿರಿಯರು ಕಿರಿಯರೆನ್ನದೆ ಆಟವಾಡುತ್ತಾರೆ. ಚೆಂಡಿಗೆ ಬೇಕಾದ ಬಟ್ಟೆಯನ್ನು ಊರಿನವರಲ್ಲಿ ಕೇಳಿ ತಂದು ಹೊಲೆದುಕೊಳ್ಳುತ್ತಾರೆ.

ಹಿಂದೂ ಹಬ್ಬಗಳಲ್ಲಿ ಶಾಲು ಸಾಬಿಯು ಭಾಗವಹಿಸುವಂತೆ ಮೊಹರಂ ಹಬ್ಬದಲ್ಲಿ ನರಸಿಯು ಹುಲಿವೇಷದಲ್ಲಿ ಕುಣಿಯುತ್ತಾನೆ. ಊರಿನ ಸೌಹಾರ್ದ ಜೀವನವನ್ನು ಕಾಣಬಹುದು. ದೆವ್ವಗಳ ಬಗೆಗೆ ಊರಿನವರಲ್ಲಿ ಬಗೆಬಗೆಯ ನಂಬಿಕೆಗಳಿವೆ. ಜಡೆಮುನಿ, ಉರಿಸಿಂಗ, ಅಗಸರ ನರಸಿ, ಬೇತಾಳ, ಮನ್ನುಗ ಇತ್ಯಾದಿ ದೆವ್ವಗಳ ಬಗೆಗೆ ರಂಜಕ ಕತೆಗಳನ್ನು ಕೇಳಬಹುದು. ಹಳ್ಳಿ ಬದುಕಿನ ಶಾಂತ ಸುಂದರ ಜೀವನವನ್ನು ನವಿರಾದ ಹಾಸ್ಯದಲ್ಲಿ ಸ್ವಾರಸ್ಯವಾಗಿ ನಿರೂಪಿಸುವ ಗೊರೂರು ರಾಮಸ್ವಾಮಿ ಅಯ್ಯಂಗಾರರ 'ನಮ್ಮ ಊರಿನ ರಸಿಕರು' ಕೃತಿ ಓದುವ ಅಭಿರುಚಿಯನ್ನು ಉಂಟುಮಾಡುವುದರೊಂದಿಗೆ ಹಳ್ಳಿ ಬದುಕನ್ನು ಬಯಸುವಂತೆ ಪ್ರೇರೇಪಿಸುತ್ತದೆ.

**ಆಕರ ಗ್ರಂಥ**


- ಗೊರೂರು ರಾಮಸ್ವಾಮಿ ಅಯ್ಯಂಗಾರ್. (2014). *ನಮ್ಮ ಊರಿನ ರಸಿಕರು.* ಐಬಿಎಚ್ ಪ್ರಕಾಶನ.